# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 220**
**ಸದಸ್ಯರ ಹೆಸರು : ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು),**
**ಉತ್ತರಿಸಬೇಕಾದ ದಿನಾಂಕ : 06.03.2025.**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 02 ವರ್ಷಗಳಿಂದ ಇಲ್ಲಿಯವರೆಗೆ ಚಲನಚಿತ್ರ ಮಂದಿರ, ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳಿಂದ ಸಂಗ್ರಹಿಸಲಾದ ಎನ್‌ರೋಲ್‌ಮೆಂಟ್ ಮತ್ತು ರಿನೀವಲ್ ತೆರಿಗೆಯ ಮೊತ್ತವೆಷ್ಟು; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 32 ಸಿಎನ್‌ಎ 2017, ದಿನಾಂಕ: 19.04.2021ರ ಅನ್ವಯ ಚಿತ್ರಮಂದಿರದ ವಿಸ್ತೀರ್ಣ 100 ಸ್ಕ್ವೇರ್ ಮೀಟರಗಳಿಗೆ 9000 ರೂಪಾಯಿಗಳನ್ನು ಸದರಿ ದರವು 5ವರ್ಷಗಳ ಅವಧಿಗೆ ನಿಗದಿಪಡಿಸಿ ಆದೇಶಿಸಲಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಪರವಾನಗಿ ನವೀಕರಣ ಶುಲ್ಕವು 2023-24ನೇ ಸಾಲಿಗೆ ರೂ.19,45,500.00 ಮತ್ತು 2024-25ನೇ ಸಾಲಿಗೆ (ಫೆಬ್ರವರಿ ಅಂತ್ಯದವರೆಗೆ) ರೂ.16,67,000.00ಗಳು ಒಟ್ಟಾರೆಯಾಗಿ ರೂ.36,12,500.00 ಗಳನ್ನು ಸಂಗ್ರಹಿಸಲಾಗಿರುತ್ತದೆ. |
| ಆ | ಬಿ.ಬಿ.ಎಂ.ಪಿ. ವ್ಯಾಪ್ತಿಯ ಚಲನಚಿತ್ರ ಮಂದಿರ ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳ ಸರ್ವೆ ನಡೆಸಲಾಗಿದೆಯೇ; ಅವುಗಳಲ್ಲಿ ಸುರಕ್ಷಾ ಕ್ರಮಗಳ ಬಗ್ಗೆ ತನಿಖೆ ನಡೆಸಿದೆಯೇ; ಇಲ್ಲವಾದಲ್ಲಿ, ಯಾವಾಗ ನಡೆಸಲಾಗುವುದು; ತನಿಖೆ ನಡೆಸಿದ್ದಲ್ಲಿ ಚಲನಚಿತ್ರ ಮಂದಿರ, ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್‌ಸ್ಕ್ರೀನ್ ಗಳಲ್ಲಿನ ಕುಂದುಕೊರತೆಗಳ ಕುರಿತು ಕೈಗೊಂಡಿರುವ ಕ್ರಮಗಳೇನು; | ಬಿ.ಬಿ.ಎಂ.ಪಿ. ವ್ಯಾಪ್ತಿಯ ಚಲನಚಿತ್ರ ಮಂದಿರ ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳ ಸರ್ವೆ ಹಾಗೂ ಸುರಕ್ಷಾ ಕ್ರಮಗಳಿಗೆ ಸಂಬಂಧಿಸಿದಂತೆ, ಸಕ್ಷಮ ಪ್ರಾಧಿಕಾರಗಳಾದ ಲೋಕೋಪಯೋಗಿ ಇಲಾಖೆ, ವಿದ್ಯುತ್ ಇಲಾಖೆ, ಅಗ್ನಿಶಾಮಕ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಇಲಾಖೆರವರುಗಳಿಂದ ಚಿತ್ರಮಂದಿರದ ಸ್ಥಳದ ಬಗ್ಗೆ ತನಿಖೆ ನಡೆಸಿ, ಹಾಗೂ ಅವಧಿಗಳ ಬಗ್ಗೆ ವರದಿ ಪಡೆದು ನಂತರವೇ ಪರವಾನಗಿಯನ್ನು ಸಕ್ಷಮ ಪ್ರಾಧಿಕಾರಿಗಳಾದ ಜಿಲ್ಲಾಧಿಕಾರಿಗಳಿಂದ ನವೀಕರಿಸಲಾಗುತ್ತಿದೆ. |

..2…

| | | |
|---|---|---|
| ಇ | ಬಿ.ಬಿ.ಎಂ.ಪಿ. ವ್ಯಾಪ್ತಿಯ ಚಲನಚಿತ್ರ ಮಂದಿರಕ್ಕೂ ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳ ದರ ವ್ಯತ್ಯಾಸವಿರುವುದಕ್ಕೆ ಕಾರಣವೇನು; ಒಂದೇ ದರವನ್ನು ನಿಗಧಿಪಡಿಸದಿರುವುದು ಯಾವ ಕಾರಣಕ್ಕಾಗಿ ಎಲ್ಲಾ ಚಲನ ಚಿತ್ರಮಂದಿರ ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳ ಗಳಲ್ಲಿ ಏಕರೂಪ ನಿಗಧಿಪಡಿಸುವಲ್ಲಿ ಸರ್ಕಾರ ಚಿಂತಿಸಿದೆಯೇ? | ಚಿತ್ರಮಂದಿರಗಳಿಗೆ ಟಿಕೆಟ್ ದರಗಳನ್ನು ಚಿತ್ರಮಂದಿರಗಳ ಮಾಲಿಕರೇ ನಿರ್ಧಾರ ಮಾಡುವ ಪದ್ಧತಿ ಜಾರಿಯಲ್ಲಿದೆ. ಅವಶ್ಯವೆನಿಸಿದ್ದಲ್ಲಿ ದರ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕಿದೆ.<br><br>ಏಕರೂಪ ಟಿಕೆಟ್ ದರವನ್ನು ನಿಗಧಿಪಡಿಸುವ ಸಂಬಂಧ ಪ್ರಸ್ತಾವನೆ ಒಳಾಡಳಿತ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |

ಸಂಖ್ಯೆ: ಹೆಚ್‌ಡಿ 08 ಸಿಎನ್‌ಎ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು